**3424—E 82—V Sc—O—November 2014**

FIFTH SEMESTER B.Com. DEGREE EXAMINATION, 2014

(Old Syllabus)

## Paper I — INCOME TAX - I

Time : Three Hours | Maximum : 80 Marks

*Answer* **all** *the questions with strict observation of inner choice in each Section.*
*Give working notes wherever it is necessary.*
*Use of calculator is allowed.*
**Question 13 *is* compulsory.**

### Section A

1. Answer any *ten* of the following. Each question carries 2 marks each :—

   (a) Who is a 'person' ?

   (b) What is previous year?

   (c) State the deductions u/s 16 from salary.

   (d) What is casual income?

   (e) What is annual value?

   (f) What is standard rent?

   (g) State the deduction u/s 24.

   (h) What is profession?

   (i) What is speculation business?

   (j) What do you mean by a "block of Assets"?

   (k) What are the provisions of commuted value of pension?

   (l) What is Vacancy Allowance?

(10 × 2 = 20 marks)

### Section B

*Answer any* **three** *of the following.*

2. Shri Parshuram received Rs. 5,00,000 as Gratuity on his retirement on 31st Dec. 2013, he was working in Tata Co. Ltd. At the time of retirement he was getting as basic salary Rs. 12,000 p.m. and Rs. 6,000 p.m. as Dearness Allowance (50% of the D.A. forms part of salary). He was served for 25 years of service.

   Calculate taxable portion and exempted portion of Gratuity for the A.Y. 2014-15. If he is covered under the Payment of Gratuity Act of 1972.

Turn over

3. Calculate exempted amount of HRA and taxable HRA under section 10 (13A) of the Income Tax Act of 1961 of the following assessees :

| *Particulars* | | *Mahesh of Hubli* | *Arun of Madras* |
|---|---|---|---|
| | | Rs. | Rs. |
| Salary for the year | ... | 3,60,000 | 2,40,000 |
| HRA received during the year | ... | 24,000 | 12,000 |
| Actual rent paid by an employee for the house | ... | 48,000 | 20,000 |

4. Mr. Raman is an employee in Suzuki Co. Ltd. He gives you the following particulars for the P.Y. 2013-14 :

   Basic salary Rs. 50,000 p.m.

   Dearness Allowance Rs. 26,000 p.m. (Rs. 13,000 enters into retirement benefits).

   He and his company contributes 20% of salary towards RPF.

   Interest credited to RPF in the excess of exempted limit is Rs. 10,000.

   Tax on employment paid by Mr. Raman is Rs. 2,400 p.a.

   Calculate the income from salary for the A.Y. 2014-15.

5. From the following particulars given by Mr. Arun, compute the income from house property for the A.Y. 2014-15 :

   Municipal value of the house is Rs. 80,000.

   Fair rental value is Rs. 60,000

   ¼ of the house was used for self-occupation and ¾ of the house is letout for residential purpose at monthly rent of Rs. 5,000.

   Following are the expenses :

| | | | Rs. |
|---|---|---|---|
| (a) | Municipal taxes | ... | 5,000 |
| (b) | Ground rent | ... | 1,000 |
| (c) | Fire insurance | ... | 2,400 |
| (d) | Collection charges | ... | 2,000 |
| (e) | Repairs | ... | 4,000 |
| (f) | Interest on loan taken for construction | ... | 15,000 |

6. Mr. Nagaraj is a citizen of India. He has been serving in Mumbai for the last 15 years. He was transferred to London which he joined on 20-4-2010. He returned to India on 1-6-2011. He was sent to Malaysia on 1-3-2012. He returned to India again on 15-3-2013.

   Determine his residential status for the previous years 2012-2013 and 2013-2014.

7. The WDV of Motor Cars owned by M/s. SRS Travels of Dharwad as on 1-4-2013 is as follows :

Motor car A – Rs. 4,00,000

Motor car B – Rs. 2,00,000

Motor car C – Rs. 3,00,000

During July 2013 motor car B was sold for Rs. 1,80,000 and a new car Y was purchased on 15th November, 2013 at Rs. 4,00,000 and spent Rs. 50,000 for its registration.

The rate of depreciation is 15%. Compute depreciation on block of motor cars for the A.Y. 2014-15 and written down value of cars.

(3 × 5 = 15 marks)

## Section C

**Question 13** *is* **compulsory** *and answer any* **two** *of the remaining questions.*
*Each question carries* 15 *marks.*

8. From the following particulars of income of Mr. Mahesh during the previous year 2013-14, compute his taxable income, if he is :

(a) Resident.

(b) Not ordinarily resident.

(c) Non-resident.

(1) Income accrued in India but received in Singapore Rs. 10,000.

(2) Income from agriculture in Pakistan Rs. 20,000.

(3) Salary received in U.K. for services rendered in India Rs. 15,000.

(4) Salary received in India Rs. 10,000 for services rendered in Bangladesh.

(5) Income from business in Japan Rs. 20,000 received there and remitted to India (business being controlled from India).

(6) Income earned and also received in New York from bank deposits Rs. 5,000.

(7) Income from agriculture in India Rs. 4,000.

(8) Leave salary accrued in India but received in London Rs. 40,000.

(9) Business profits earned in the past in Iraq but brought to India in the previous year Rs. 15,000.

(10) Interest on P.O.S.B. Account Rs. 1,000.

9. Mr. Santosh working in a Pvt. Company in Bangalore, he furnishes the following information of his salary income for the previous year 2013-14 :—

(a) Basic salary Rs. 30,000 p.m.

(b) Dearness allowance Rs. 10,000 p.m. (enters into retirement benefit)

(c) Bonus equal to one month basic pay.

(d) Medical allowance Rs. 2,000 p.m.

(e) HRA Rs. 5,000 p.m. He is living in a rented house at Bangalore by paying a rent of Rs. 6,000 p.m.

(f) He was provided with motor car of 1,800 CC along with driver. Employer meets all the running and maintenance expenses. The car is used both for private and official purposes.

(g) He contributes to RPF at 18% of his salary and the company contributes an equal amount.

(h) Interest credited to the accumulated balance of the fund at 12% Rs. 8,400 during the year.

(i) His son is studying in residential school at Pune and company is paying hostel allowance at Rs. 500 p.m.

(j) Life Insurance premium of Rs. 10,000 on his policy was paid by the employer.

(k) He paid profession tax of Rs. 2,400 p.a.

Compute his income from salary for A.Y. 2014–2015.

10. Mr. Sateesh, an accountant, in Tata Co. Ltd., Belgaum, funrnishes the following information of House Property owned by him for the previous year ending 31-3-2014 :—

| *Particulars* | | *House I* | *House II* | *House III* |
|---|---|---|---|---|
| Municipal value | ... | 32,000 | 60,000 | 40,000 |
| Rent received | ... | — | 56,000 | 44,000 |
| Standard rent | ... | — | 52,000 | 40,000 |
| Local taxes | ... | 2,000 | 4,000 | 4,000 |
| Interest on loan taken for construction | ... | 12,000 | 10,000 | 8,000 |
| Repairs | ... | 3,000 | 4,000 | 6,400 |
| Land revenue | ... | 3,000 | 3,600 | 3,600 |
| Nature of occupation | ... | Self occupied | Let out | Let out |

Compute his income from house property taking into consideration that the house III remained vacant for 2 months and unrealised rent amounted to Rs. 2,500 in the previous year.

11. Dr. Shan a registered Medical Practioner furnishes the following receipts and payments account for the financial year 2013-14 :

| | Receipts | Rs. | | Payments | Rs. |
|---|---|---|---|---|---|
| To | balance b/d ... | 28,000 | By | Rent of clinic ... | 10,000 |
| | Consultation fees ... | 40,000 | | LIC premium ... | 30,000 |
| | Dividend ... | 20,000 | | Electricity and water ... | 4,000 |
| | Interest on POSB A/c. ... | 14,000 | | Professional books ... | 10,000 |
| | Visiting fees ... | 60,000 | | Household expenses ... | 15,600 |
| | Loan from bank ... | 50,000 | | Collection charges on dividend ... | 200 |
| | Sale of medicines ... | 1,20,000 | | Car purchased ... | 60,000 |
| | Gifts and presents ... | 10,000 | | Surgical equipments ... | 9,600 |
| | Remuneration from articles published in Professional journals ... | 12,000 | | Income tax ... | 20,000 |
| | | | | Salary to staff ... | 30,000 |
| | | | | Purchase of medicines ... | 50,000 |
| | | | | Interest on loan ... | 8,000 |
| | | | | Car expenses ... | 70,000 |
| | | | | Balance c/d ... | 36,600 |
| | | 3,54,000 | | | 3,54,000 |

Compute his income from profession for the assessment year 2014-15 after taking into the following information :

(a) 2/3 of the use of car related to his professional use.

(b) Depreciation allowable on car is at 15%, on books at 60% and on surgical equipments at 20%.

(c) Gifts and presents include Rs. 6,000 from patients and Rs. 4,000 received as birthday gifts.

(d) LIC premium paid on his own life.

12. From the follownig Profit and Loss Account of Mr Vivek and the information given below, compute his income from business for the A.Y. 2014-15 :

| | | Rs. | | | Rs. |
|---|---|---|---|---|---|
| To | Office salaries | 20,000 | By | Gross profit | 3,15,000 |
| | Salary to proprietor | 10,000 | | Profit on sale of building | 40,000 |
| | Interest on Capital | 4,000 | | Bad debts recovered | |
| | General Expenses | 10,000 | | (allowed earlier) | 6,000 |
| | Bad debts | 4,000 | | Interest on Govt. securities | 15,000 |
| | Fire insurance | 4,000 | | Miscellaneous income | 8,000 |
| | Advertisement | 9,000 | | | |
| | Depreciation | 8,000 | | | |
| | Reserve for bad debts | 16,000 | | | |
| | Custom duty | 4,000 | | | |
| | Advance Income tax | 12,000 | | | |
| | Legal charges | 3,000 | | | |
| | Motor car expenses | 2,000 | | | |
| | Net profit | 2,78,000 | | | |
| | | 3,84,000 | | | 3,84,000 |

General expenses include Rs. 4,000 paid as compensation to an employee terminated in the best interest of the business.

The depreciation is found to be in excess by Rs. 3,600. The advertisement cost includes one wooden showcase Rs.1,000 and calendars Rs. 3,000.

13. Mr. Shivappa is the owner of two houses. He used both the houses for his residence during the previous year 2013-14. The details of both the houses are as follows :

| *Particulars* | *House I* | *House II* |
|---|---|---|
| Municipal value | 12,00,000 | 15,00,000 |
| Fair rental value | 13,00,000 | 14,00,000 |
| Standard Rent | 11,00,000 | 12,00,000 |
| Municipal taxes paid | 1,20,000 | 1,50,000 |
| Interest on Housing Loan for the P.Y. | 1,80,000 | 1,40,000 |

Questions :

(a) As an assessee which house Mr. Shivappa would consider as self-occupied property.

(b) Give reasons why he has to select a particular house as S.O.P.

(3 × 15 = 45 marks)

## Kannada Version

*ಆಂತರಿಕ ಆಯ್ಕೆಗೆ ಒಳಪಟ್ಟು ಪ್ರತಿ ವಿಭಾಗದ ಎಲ್ಲಾ ಪ್ರಶ್ನೆಗಳನ್ನು ಉತ್ತರಿಸಿರಿ.*
*ಅವಶ್ಯಕವಿದ್ದಲ್ಲಿ ಟಿಪ್ಪಣಿಗಳನ್ನು ಕೊಡಿ.*
*ಸಾಧಾರಣ ಕಾಲ್ಕುಲೇಟರ್ ಬಳಸಲು ಅನುಮತಿಸಲಾಗಿದೆ.*

### ವಿಭಾಗ ಅ

1. ಕೆಳಗಿನ ಯಾವುದಾದರೂ **ಹತ್ತು** ಪ್ರಶ್ನೆಗಳಿಗೆ ಉತ್ತರಿಸಿ :

   (a) ವ್ಯಕ್ತಿ ಎಂದರೆ ಯಾರು?

   (b) ಹಣಕಾಸು ವರ್ಷ (ಹಿಂದಿನ ವರ್ಷ) ಎಂದರೇನು?

   (c) ವೇತನದಿಂದ ಕಡಿತಗೊಳ್ಳುವ ಕಲಂ 16ರಲ್ಲಿ ಕಡಿತಗಳನ್ನು ತಿಳಿಸಿ.

   (d) ಆಕಸ್ಮಿಕ ಆದಾಯ ಎಂದರೇನು?

   (e) ವಾರ್ಷಿಕ ಮೌಲ್ಯ ಎಂದರೇನು?

   (f) ಪ್ರಮಾಣೀಕೃತ ಬಾಡಿಗೆ ಎಂದರೇನು?

   (g) ಕಲಂ 24ರ ಕಡಿತಗಳನ್ನುತಿಳಿಸಿ.

   (h) ವೃತ್ತಿ ಎಂದರೇನು?

   (i) ಸಟ್ಟಾ ವ್ಯಾಪಾರ ಎಂದರೇನು?

   (j) ಆಸ್ತಿಗಳ ಗುಂಪು ಎಂದರೇನು?

   (k) ನಿವೃತ್ತಿ ವೇತನ ನಗದೀಕರಣದ ನಿಯಮಗಳು ಯಾವುವು?

   (l) ಖಾಲಿ ಭತ್ಯೆ ಎಂದರೇನು?

(10 × 2 = 20 marks)

### ವಿಭಾಗ ಬ

*ಯಾವುದಾದರೂ* ***ಮೂರು*** *ಪ್ರಶ್ನೆಗಳಿಗೆ ಉತ್ತರಿಸಿರಿ.*
*ಪ್ರತಿ ಪ್ರಶ್ನೆಗೆ 5 ಅಂಕಗಳು.*

2. ಟಾಟಾ ಕಂಪನಿ ನಿಯಮಿತದಲ್ಲಿ ಸೇವೆ ಸಲ್ಲಿಸುತ್ತಿರುವ ಶ್ರೀ ಪರಶುರಾಮ ಇವರು ದಿನಾಂಕ 31–12–2013ರಂದು ನಿವೃತ್ತಿ ಹೊಂದಿ ರೂ. 5,00,000 ಗಳನ್ನು ನಿವೃತ್ತಿ ಗೌರವ ಧನವಾಗಿ ಪಡೆದಿರುತ್ತಾರೆ. ಇವರು ನಿವೃತ್ತಿ ಹೊಂದುವ ಸಮಯದಲ್ಲಿ ಪ್ರತಿ ತಿಂಗಳು ರೂ. 12,000 ಮೂಲವೇತನ ಹಾಗೂ ಪ್ರತಿ ತಿಂಗಳ ರೂ. 6,000 ತುಟ್ಟಿಭತ್ಯೆ (ಶೇಕಡಾ 50 ರಷ್ಟು ನಿವೃತ್ತಿ ಸೌಲಭ್ಯಕ್ಕೆ ಸೇರುತ್ತದೆ) ಯನ್ನು ಪಡೆಯುತ್ತಿದ್ದರು. ಇವರು 25 ವರ್ಷಗಳ ಸೇವೆ ಸಲ್ಲಿಸಿರುತ್ತಾರೆ.

   2014–15ರ ಕರಾಕರಣೆ ವರ್ಷಕ್ಕೆ ತೆರಿಗೆಗೆ ಒಳಪಡುವ ಮತ್ತು ತೆರಿಗೆ ವಿನಾಯಿತಿ ಪಡೆಯುವ ನಿವೃತ್ತಿ ಗೌರವಧನವನ್ನು ಲೆಕ್ಕ ಹಾಕಿ, ಇವರು ಪಡೆದಿರುವ ನಿವೃತ್ತಿ ಗೌರವ ಧನವು "ನಿವೃತ್ತಿ ಗೌರವಧನ ಪಾವತಿ ಕಾಯ್ದೆ 1971"ಕ್ಕೆ ಒಳಪಟ್ಟಿರುತ್ತದೆ.

3. ಆದಾಯ ತೆರಿಗೆ ಕಾಯ್ದೆ 1961 ಕಲಂ 10 (13A) ರನ್ವಯ ತೆರಿಗೆಗೆ ಒಳಪಡುವ ಮತ್ತು ತೆರಿಗೆ ವಿನಾಯಿತಿಗೆ ಒಳಪಡುವ ಮನೆಬಾಡಿಗೆ ಭತ್ಯೆಯನ್ನು ಈ ಕೆಳಕಂಡ ಕರದಾತರಿಗಾಗಿ ಲೆಕ್ಕ ಹಾಕಿ :

| ವಿವರಗಳು | | ಹುಬ್ಬಳ್ಳಿಯ ಮಹೇಶ | ಮದ್ರಾಸಿನ ಅರುಣ |
|---|---|---|---|
| ವಾರ್ಷಿಕ ವೇತನ | ... | 3,60,000 | 2,40,000 |
| ಪಡೆದಿರುವ ವಾರ್ಷಿಕ ಮನೆಬಾಡಿಗೆ ಭತ್ಯೆ | ... | 24,000 | 12,000 |
| ನೌಕರನು ಪಾವತಿಸಿದ ಮನೆ ಬಾಡಿಗೆ | ... | 48,000 | 20,000 |

4. ಶ್ರೀ ರಾಮನ್ ಇವರು 'ಸುಜುಕಿ ಕಂಪನಿ ನಿಯಮಿತ' ದ ನೌಕರರಾಗಿರುತ್ತಾರೆ. ಇವರು 2013–14ರ ಹಣಕಾಸು ವರ್ಷಕ್ಕೆ ಸಂಬಂಧಿಸಿರುವ ಈ ಕೆಳಗಿನ ವಿವರಗಳನ್ನು ನೀಡಿರುತ್ತಾರೆ :

ಮೂಲ ವೇತನ ರೂ. 50,000 ಪ್ರತಿ ತಿಂಗಳು.

ತುಟ್ಟಿಭತ್ಯೆ ರೂ. 26,000 ಪ್ರತಿ ತಿಂಗಳು (ರೂ. 13,000 ನಿವೃತ್ತಿ ಸೌಲಭ್ಯಕ್ಕೆ ಸೇರುತ್ತದೆ).

ಇವರು ಮತ್ತು ಕಂಪನಿಯವರು ವೇತನ ಶೇಕಡಾ 20% ರಷ್ಟನ್ನು ಮಾನ್ಯತೆ ಪಡೆದ ಭವಿಷ್ಯ ನಿಧಿಗೆ ಪಾವತಿಸುತ್ತಾರೆ.

ಮಾನ್ಯತೆ ಪಡೆದ ಭವಿಷ್ಯ ನಿಧಿಗೆ ಜಮಾ ಆದ ಬಡ್ಡಿ ಹಣದಲ್ಲಿ ತೆರಿಗೆ ವಿನಾಯಿತಿ ಮೀರಿದ ಬಡ್ಡಿ ಹಣ.

ಶ್ರೀ ರಾಮನ್ ಇವರು ವಾರ್ಷಿಕ ರೂ. 2,400 ಗಳ ವೃತ್ತಿ ತೆರಿಗೆಯನ್ನು ಪಾವತಿಸಿರುತ್ತಾರೆ.

ಕರಾಕರಣೆ ವರ್ಷ 2014–15 ಇವರ ವೇತನದಿಂದ ಬಂದ ಆದಾಯವನ್ನು ಲೆಕ್ಕ ಹಾಕಿ.

5. ಶ್ರೀ ಅರುಣ ಇವರ ಕೆಳಗಿನ ಮಾಹಿತಿಯನ್ನು ಆಧರಿಸಿ ಕರಾಕರಣೆ ವರ್ಷ 2014–15ಕ್ಕೆ ಇವರ ಮನೆ ಆಸ್ತಿಯಿಂದ ಬಂದ ಆದಾಯವನ್ನು ಲೆಕ್ಕ ಹಾಕಿ.

| | | |
|---|---|---|
| ಮನೆಯ ನಗರ ಸಭೆ ಮೌಲ್ಯ | ... | ರೂ. 80,000 |
| ನೈಜ ಬಾಡಿಗೆ ಮೌಲ್ಯ | ... | ರೂ. 60,000 |

ಮನೆಯ ¼ ಅಂಶ ಭಾಗವನ್ನು ಸ್ವಂತ ಬಳಕೆ ಉಪಯೋಗಿಸುತ್ತಿದ್ದು, ಇನ್ನುಳಿದ ¾ ಅಂಶ ಭಾಗವನ್ನು ವಾಸಕ್ಕಾಗಿ ಬಾಡಿಗೆ ಕೊಡಲಾಗಿದ್ದು, ಪ್ರತಿ ತಿಂಗಳ ರೂ. 5,000 ಬಾಡಿಗೆ ಪಡೆಯಲಾಗುತ್ತಿದೆ.

ಈ ಮನೆಗೆ ಸಂಬಂಧಿಸಿದಂತೆ ಕೆಳಗಿನಂತೆ ಮೌಲ್ಯ ಮಾಡಲಾಗಿದೆ :

| | | | ರೂ. |
|---|---|---|---|
| (a) | ನಗರ ಸಭೆ ತೆರಿಗೆಗಳು | ... | 5,000 |
| (b) | ನೆಲ ಬಾಡಿಗೆ | ... | 1,000 |
| (c) | ಬೆಂಕಿ ವಿಮೆ | ... | 2,400 |
| (d) | ಸಂಗ್ರಹಣ ವೆಚ್ಚ | ... | 2,000 |
| (e) | ದುರಸ್ತಿಗಳು | ... | 4,000 |
| (f) | ಮನೆ ಕಟ್ಟಲು ಪಡೆದ ಸಾಲದ ಮೇಲಿನ ಬಡ್ಡಿ | ... | 15,000 |

6. ಶ್ರೀ ನಾಗರಾಜ ಇವರು ಭಾರತದ ಪ್ರಜೆಯಾಗಿದ್ದು 15 ವರ್ಷಗಳಿಂದ ಮುಂಬೈನಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಲಂಡನ್‌ಗೆ ವರ್ಗಾವಣೆಯಾಗಿದ್ದು ದಿನಾಂಕ 20-4-2010 ರಂದು ವರದಿ ಮಾಡಿಕೊಂಡಿರುತ್ತಾರೆ. ಇವರು ದಿನಾಂಕ 1-6-2011 ರಂದು ಭಾರತಕ್ಕೆ ಮರಳಿರುತ್ತಾರೆ. ನಂತರ ಇವರನ್ನು ದಿನಾಂಕ 1-3-2012 ರಂದು ಮಲೇಶಿಯಾಕ್ಕೆ ಕಳುಹಿಸಲಾಯಿತು. ದಿನಾಂಕ 15-3-2013ರಂದು ಇವರು ಭಾರತಕ್ಕೆ ಮರಳಿ ಬಂದಿರುತ್ತಾರೆ.

ಹಣಕಾಸು ವರ್ಷ 2012-13 ಮತ್ತು 2013-14ಕ್ಕೆ ಇವರ ನಿವಾಸದ ಸ್ಥಾನಮಾನವನ್ನು ತಿಳಿಸಿರಿ.

7. ಎಸ್.ಆರ್.ಎಸ್. ಟ್ರಾವೆಲ್ಸ್ ಇವರ ಮಾಲಿಕತ್ವದಲ್ಲಿರುವ ಕಾರುಗಳ ಇಳುವರಿ ಮೌಲ್ಯವು (W.D.V.) ದಿನಾಂಕ 1-4-2013 ರಂದು ಈ ಕೆಳಗಿನಂತಿರುತ್ತವೆ :

ಮೋಟಾರ ಕಾರು A – ರೂ. 4,00,000

ಮೋಟಾರ ಕಾರು B – ರೂ. 2,00,000

ಮೋಟಾರ ಕಾರು C – ರೂ. 3,00,000

ಜುಲೈ 2013ರಲ್ಲಿ ಮೋಟಾರ ಕಾರು B ಯನ್ನು ರೂ. 1,80,000 ಕ್ಕೆ ಮಾರಾಟ ಮಾಡಲಾಗಿದೆ ಮತ್ತು ದಿನಾಂಕ 15-11-2013ರಂದು ಮೋಟಾರ ಕಾರು Y ನ್ನು ರೂ. 4,00,000 ಕ್ಕೆ ಖರೀದಿಸಲಾಗಿದ್ದು, ಇದರ ನೋಂದಣಿಗಾಗಿ ರೂ. 50,000 ವೆಚ್ಚ ಮಾಡಲಾಗಿದೆ. ಸವಕಳಿ ದರ ಶೇಕಡಾ 15 ರಷ್ಟು ಇರುತ್ತವೆ.

ಕರಾಕರಣೆ ವರ್ಷ 2014-15ಕ್ಕೆ 'ಮೋಟಾರ ಕಾರು ಗುಂಪುಗಳ' ಮೇಲಿನ ಸವಕಳಿಯನ್ನು ಮತ್ತು ಇಳುವರಿ ಮೌಲ್ಯ (W.D.V.) ವನ್ನು ಲೆಕ್ಕಹಾಕಿರಿ.

(3 × 5 = 15 marks)

## ವಿಭಾಗ ಕ

**ಪ್ರಶ್ನೆ 13 ಕಡ್ಡಾಯ.**

*ಇನ್ನುಳಿದ ಪ್ರಶ್ನೆಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಉತ್ತರಿಸಿ.*

*ಪ್ರತಿ ಪ್ರಶ್ನೆಗೆ 15 ಅಂಕಗಳು.*

8. ಶ್ರೀ ಮಹೇಶ ಇವರು ಹಣಕಾಸು ವರ್ಷ 2013-14ರ ಆದಾಯದ ವಿವರಗಳನ್ನು ಈ ಕೆಳಗಿನಂತೆ ಕೊಟ್ಟಿರುತ್ತಾರೆ. ಇವರ ತೆರಿಗೆಗೆ ಒಳಪಡುವ ಆದಾಯವನ್ನು ಲೆಕ್ಕ ಹಾಕಿ, ಒಂದು ವೇಳೆ ಅವರು :

(i) 'ಸಾಮಾನ್ಯ ನಿವಾಸಿ' ಗಳಾಗಿದ್ದರೆ,

(ii) 'ಸಾಮಾನ್ಯ ನಿವಾಸಿಗಳಾಗಿರದಿದ್ದರೆ',

(iii) ನಿವಾಸಿಗಳಾಗಿರದಿದ್ದರೆ.

(1) ಭಾರತದಲ್ಲಿ ಗಳಿಸಿರುವ ಆದಾಯ ಸಿಂಗಾಪೂರದಲ್ಲಿ ಪಡೆಯಲಾಗಿದೆ ರೂ. 10,000.

(2) ಪಾಕಿಸ್ತಾನದಲ್ಲಿನ ವ್ಯವಸಾಯದಿಂದ ಬಂದ ಆದಾಯ ರೂ. 20,000.

(3) ಭಾರತದಲ್ಲಿ ಸೇವೆಸಲ್ಲಿಸಿ ಯೂ.ಕೆ. (ಇಂಗ್ಲೆಂಡ್) ದಲ್ಲಿ ಪಡೆದ ವೇತನ ರೂ. 15,000.

(4) ಬಾಂಗ್ಲಾದೇಶದಲ್ಲಿ ಸೇವೆ ಸಲ್ಲಿಸಲಾಗಿದ್ದಕ್ಕೆ ಭಾರತದಲ್ಲಿ ವೇತನ ಪಡೆಯಲಾಗಿದೆ ರೂ. 10,000.

(5) ಜಪಾನ ದೇಶದಲ್ಲಿಯ ವ್ಯಾಪಾರದಿಂದ ಬಂದ ಲಾಭ ಜಪಾನಲ್ಲಿಯೆ ಪಡೆದು ಭಾರತಕ್ಕೆ ಕಳುಹಿಸಲಾಗಿದೆ ರೂ.20,000 (ವ್ಯಾಪಾರವನ್ನು ಭಾರತದಿಂದ ನಿಯಂತ್ರಿಸಲಾಗುತ್ತದೆ).

(6) ನ್ಯೂಯಾರ್ಕನ ಬ್ಯಾಂಕನಲ್ಲಿ ಠೇವಣಿಯಿಂದ ಬಂದ ಆದಾಯ, ಅಲ್ಲಿಯೇ ಪಡೆಯಲಾಗಿದೆ ರೂ. 5,000.

(7) ಭಾರತದಲ್ಲಿನ ವ್ಯವಸಾಯದಿಂದ ಬಂದ ಆದಾಯ ರೂ. 4,000.

(8) ಭಾರತದಲ್ಲಿ ಗಳಿಸಿದ ರಜೆ ಸಂಬಳ ಲಂಡನ್‌ನಲ್ಲಿ ಪಡೆಯಲಾಗಿದೆ. ರೂ. 40,000.

(9) ಇರಾಕನಲ್ಲಿ ಹಿಂದೆ ಗಳಿಸಿರುವ ವ್ಯಾಪಾರದ ಲಾಭವನ್ನು ಭಾರತಕ್ಕೆ ಈ ಹಣಕಾಸು ವರ್ಷದಲ್ಲಿ ತರಲಾಗಿದೆ.

(10) ಅಂಚೆ ಕಛೇರಿ ಉಳಿತಾಯ ಖಾತೆಯಿಂದ ಬಡ್ಡಿ ರೂ. 1,000.

9. ಶ್ರೀ ಸಂತೋಷ ಇವರು ಬೆಂಗಳೂರಿನಲ್ಲಿ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿರುತ್ತಾರೆ. ಅವರು ಹಣಕಾಸು ವರ್ಷ 2013–14ಕ್ಕೆ ಸಂಬಂಧಿಸಿದ ತಮ್ಮ ವೇತನದ ಮಾಹಿತಿಯನ್ನು ಈ ಕೆಳಗಿನಂತೆ ನೀಡಿರುತ್ತಾರೆ :

(a) ಮೂಲ ವೇತನ ರೂ. 30,000 ಪ್ರತಿ ತಿಂಗಳು.

(b) ತುಟ್ಟಿ ಭತ್ಯೆ ರೂ. 10,000 ಪ್ರತಿ ತಿಂಗಳು (ನಿವೃತ್ತಿ ಸೌಲಭ್ಯಗಳಿಗೆ ಸೇರುತ್ತದೆ).

(c) ಬೋನಸ್ – ಒಂದು ತಿಂಗಳ ಮೂಲವೇತನಕ್ಕೆ ಸಮವಾಗಿರುತ್ತದೆ.

(d) ವೈದ್ಯಕೀಯ ಭತ್ಯೆ ರೂ. 2,000 ಪ್ರತಿ ತಿಂಗಳು.

(e) ಮನೆ ಬಾಡಿಗೆ ಭತ್ಯೆ ರೂ. 5,000 ಪ್ರತಿ ತಿಂಗಳು. ಇವರು ಬೆಂಗಳೂರಿನಲ್ಲಿ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದು ಪ್ರತಿ ತಿಂಗಳು ರೂ. 6,000 ಬಾಡಿಗೆ ಪಾವತಿಸುತ್ತಾರೆ.

(f) ಇವರಿಗೆ 1800 CC ಮೋಟಾರ ಕಾರಿನ ಸೌಲಭ್ಯ ಒದಗಿಸಲಾಗಿದ್ದು, ಇದರ ನಿರ್ವಹಣಾ ವೆಚ್ಚವನ್ನು ಕಂಪನಿಯವರೆ ಭರಿಸುತ್ತಾರೆ. ಈ ಕಾರನ್ನು ಅವರು ಖಾಸಗಿ ಹಾಗೂ ಕಛೇರಿ ಉದ್ದೇಶಗಳಿಗಾಗಿ ಬಳಸಿಕೊಳ್ಳುತ್ತಾರೆ.

(g) ಇವರು ಮಾನ್ಯತೆ ಪಡೆದ ಭವಿಷ್ಯ ನಿಧಿಗೆ ತಮ್ಮ ವೇತನದ ಶೇಕಡಾ 18 ರಷ್ಟು ವಂತಿಕೆಯಾಗಿ ಪಾವತಿಸುತ್ತಾರೆ. ಕಂಪನಿಯವರು ಸಹ ಅಷ್ಟೆ ಮೊತ್ತದ ಹಣವನ್ನು ವಂತಿಕೆಯಾಗಿ ಪಾವತಿಸುತ್ತಾರೆ.

(h) ಭವಿಷ್ಯ ನಿಧಿಗೆ ಜಮಾ ಆದ ಮೊತ್ತಕ್ಕೆ ಶೇಕಡಾ 12 ರಂತೆ ಬಡ್ಡಿ ಹಣ ರೂ. 8,400 ಜಮಾ ಆಗಿರುತ್ತದೆ.

(i) ಇವರ ಮಗ ಪುಣೆ ವಸತಿ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದು, ಕಂಪನಿಯವರು ವಸತಿ ನಿಲಯ ಭತ್ಯೆಯಾಗಿ ರೂ. 500 ಪಾವತಿಸುತ್ತಾರೆ.

(j) ಇವರ ಜೀವ ವಿಮಾ ಪಾಲಿಸಿ ಮೇಲಿನ ವಿಮಾ ಕಂತು ರೂ. 10,000 ಗಳನ್ನು ಕಂಪನಿಯವರು ಪಾವತಿಸಿರುತ್ತಾರೆ.

(j) ಇವರು ರೂ. 2,400 ಗಳನ್ನು ವಾರ್ಷಿಕ ವೃತ್ತಿ ತೆರಿಗೆಯಾಗಿ ಪಾವತಿಸಿರುತ್ತಾರೆ.

ಕರಾಕರಣೆ ವರ್ಷ 2014–15ರ ಸಾಲಿನಲ್ಲಿ ಅವನ ಸಂಬಳದ ಆದಾಯವನ್ನು ಲೆಕ್ಕ ಹಾಕಿರಿ.

10. ಶ್ರೀ ಸತೀಶ ಇವರು ಬೆಳಗಾವಿಯ ಟಾಟಾ ಕಂಪನಿ ನಿಯಮಿತದಲ್ಲಿ ಲೆಕ್ಕಿಗರಾಗಿದ್ದು, 31–3–2014ಕ್ಕೆ ಕೊನೆಗೊಂಡ ಹಣಕಾಸು ವರ್ಷಕ್ಕೆ ತಾವು ಮಾಲಿಕತ್ವ ಹೊಂದಿದ ಮನೆ ಆಸ್ತಿಯ ಮಾಹಿತಿಯನ್ನು ಈ ಕೆಳಗಿನಂತೆ ನೀಡಿರುತ್ತಾರೆ :

| ವಿವರಗಳು | | ಮನೆ I | ಮನೆ II | ಮನೆ III |
|---|---|---|---|---|
| ನಗರ ಸಭೆ ಮೌಲ್ಯ | ... | 32,000 | 60,000 | 40,000 |
| ಪಡೆದ ಬಾಡಿಗೆ | ... | – | 56,000 | 44,000 |
| ಪ್ರಮಾಣೀಕೃತ ಬಾಡಿಗೆ | ... | – | 52,000 | 40,000 |
| ಸ್ಥಳೀಯ ತೆರಿಗೆಗಳು | ... | 2,000 | 4,000 | 4,000 |
| ಮನೆ ಕಟ್ಟಲು ಪಡೆದ ಸಾಲದ ಮೇಲಿನ ಬಡ್ಡಿ | ... | 12,000 | 10,000 | 8,000 |
| ದುರಸ್ತಿಗಳು | ... | 3,000 | 4,000 | 6,400 |
| ಭೂ ಕಂದಾಯ | ... | 3,000 | 3,600 | 3,600 |
| ಬಳಕೆ ಸ್ವರೂಪ | ... | ಸ್ವಂತ ಬಳಕೆ | ಬಾಡಿಗೆ | ಬಾಡಿಗೆ |

ಈ ವರ್ಷ ಮನೆ III ರಲ್ಲಿ ಎರಡು ತಿಂಗಳ ಖಾಲಿ ಇರುತ್ತದೆ ಹಾಗೂ ಈ ಮನೆಗೆ ಸಂಬಂಧಿಸಿದಂತೆ ರೂ. 2,500 ವಸೂಲಾಗದಿರುವ ಬಾಡಿಗೆ ಇರುತ್ತವೆ. ಇವುಗಳನ್ನು ಪರಿಗಣನೆಗೆ ತೆಗೆದುಕೊಂಡು ಇವರ ಮನೆ ಆಸ್ತಿಯಿಂದ ಬಂದ ಆದಾಯವನ್ನು ಕಂಡು ಹಿಡಿಯಿರಿ.

11. ಡಾ. ಶಾನ್ ಇವರು ನೋಂದಾಯಿತ ವೈದ್ಯರಾಗಿದ್ದು, ಅವರು ಹಣಕಾಸು ವರ್ಷ 2013–14ರ ತಮ್ಮ ಸ್ವೀಕೃತಿ ಮತ್ತು ಪಾವತಿ ಖಾತೆಯ ವಿವರಗಳನ್ನು ಈ ಕೆಳಗಿನಂತೆ ನೀಡಿರುತ್ತಾರೆ :

| ಸ್ವೀಕೃತಿಗಳು | ರೂ. | ಪಾವತಿಗಳು | ರೂ. |
|---|---|---|---|
| To ಪ್ರಾರಂಭ ಶಿಲ್ಕು ... | 28,000 | By ಆಸ್ಪತ್ರೆಯ ಬಾಡಿಗೆ ... | 10,000 |
| ಸಲಹಾ ಶುಲ್ಕ ... | 40,000 | ಜೀವ ವಿಮಾ ಕಂತು ... | 30,000 |
| ಲಾಭಾಂಶ ... | 20,000 | ವಿದ್ಯುತ್ ಮತ್ತು ನೀರು ... | 4,000 |
| ಅ.ಕ. ಉ. ಖಾತೆಯಿಂದ ಬಂದ ಬಡ್ಡಿ ... | 14,000 | ವೃತ್ತಿ ಪುಸ್ತಕಗಳು ... | 10,000 |
| ಭೇಟಿ ಶುಲ್ಕ ... | 60,000 | ಮನೆ ಖರ್ಚುಗಳು ... | 15,600 |
| ಬ್ಯಾಂಕಿನಿಂದ ಪಡೆದ ಸಾಲ ... | 50,000 | ಲಾಭಾಂಶ ಪಡೆಯುವ ವೆಚ್ಚ ... | 200 |
| ಔಷಧಿ ಮಾರಾಟ ... | 1,20,000 | ಕಾರು ಖರೀದಿ ... | 60,000 |
| ಕಾಣಿಕೆಗಳು ಮತ್ತು ಉಡುಗೊರೆಗಳು ... | 10,000 | ಶಸ್ತ್ರ ಚಿಕಿತ್ಸೆ ಉಪಕರಣಗಳು ... | 9,600 |
| ವೃತ್ತಿ ಪತ್ರಿಕೆಗಳಲ್ಲಿ ಲೇಖನ | | ಆದಾಯ ತೆರಿಗೆ ... | 20,000 |
| ಪ್ರಕಟಣೆಯಿಂದ ಬಂದ | | ಸಿಬ್ಬಂದಿ ವೇತನ ... | 30,000 |
| ಸಂಭಾವನೆ ... | 12,000 | ಔಷಧಿಗಳ ಖರೀದಿ ... | 50,000 |
| | | ಸಾಲದ ಮೇಲಿನ ಬಡ್ಡಿ ... | 8,000 |
| | | ಕಾರಿನ ಖರ್ಚುಗಳು ... | 70,000 |
| | | ಅಂತಿಮ ಶಿಲ್ಕು ... | 36,600 |
| | 3,54,000 | | 3,54,000 |

ಕರಾಕರಣೆ ವರ್ಷ 2014–15ಕ್ಕೆ ಇವರ ವೃತ್ತಿಯಿಂದ ಬಂದ ಆದಾಯವನ್ನು, ಈ ಕೆಳಗಿನ ಮಾಹಿತಿಯನ್ನು ಪರಿಗಣಿಸಿ ಲೆಕ್ಕ ಹಾಕಿ :

(a) 2/3 ಅಂಶಗಳಷ್ಟು ಕಾರಿನ ಉಪಯೋಗವು ಇವರ ವೃತ್ತಿಗೆ ಸಂಬಂಧಿಸಿರುತ್ತದೆ.

(b) ಅನುಮತಿಸಿದ ಸವಕಳಿಯು ಕಾರಿನ ಮೇಲೆ ಶೇಕಡಾ 15ರಷ್ಟು, ಪುಸ್ತಕಗಳ ಮೇಲೆ ಶೇಕಡಾ 60 ರಷ್ಟು ಹಾಗೂ ಶಸ್ತ್ರಚಿಕಿತ್ಸೆ ಉಪಕರಣಗಳ ಮೇಲೆ ಶೇಕಡಾ 20 ರಷ್ಟು ಇರುತ್ತದೆ.

(c) ಕಾಣಿಕೆಗಳು ಮತ್ತು ಉಡುಗೊರೆಗಳಲ್ಲಿ ರೂ. 6,000 ರೋಗಿಗಳಿಂದ ಹಾಗೂ ರೂ. 4,000 ತಮ್ಮ ಜನ್ಮದಿನದ ಕಾಣಿಕೆಗಳಾಗಿ ಪಡೆದಿರುವವುಗಳು ಕೂಡಿರುತ್ತವೆ.

(d) ಪಾವತಿಸಿದ ಜೀವ ವಿಮಾ ಕಂತ ತಮ್ಮ ಸ್ವಂತ ಜೀವ ವಿಮಾ ಪಾಲಿಸಿಗೆ ಸೇರಿರುತ್ತದೆ.

12. ಶ್ರೀ ವಿವೇಕ ಇವರು ಈ ಕೆಳಗೆ ಕೊಟ್ಟಿರುವ ಲಾಭ ಮತ್ತು ನಷ್ಟ ಖಾತೆಯಿಂದ ಮತ್ತು ಕೆಳಗಿನ ಮಾಹಿತಿಯನ್ನು ಪರಿಗಣಿಸಿ, ಕರಾಕರಣೆ ವರ್ಷ 2014–15ಕ್ಕೆ ಅವರ ವ್ಯಾಪಾರದಿಂದ ಬಂದ ಆದಾಯವನ್ನು ಲೆಕ್ಕ ಹಾಕಿ :

| | ರೂ. | | ರೂ. |
|---|---|---|---|
| To ಕಛೇರಿ ವೇತನಗಳು ... | 20,000 | By ಸಮಗ್ರ ಲಾಭ ... | 3,15,000 |
| ಮಾಲಿಕರ ವೇತನ ... | 10,000 | ಕಟ್ಟಡ ಮಾರಾಟದಿಂದ ಬಂದ ಲಾಭ ... | 40,000 |
| ಬಂಡವಾಳದ ಮೇಲೆ ಬಡ್ಡಿ ... | 4,000 | ಬಾರದಿರುವ ಸಾಲಗಳ ವಸೂಲಾತಿ | |
| ಸಾಮಾನ್ಯ ಖರ್ಚುಗಳು ... | 10,000 | (ಹಿಂದೆ ಅನುಮತಿಸಿರುತ್ತದೆ) ... | 6,000 |
| ಬರದಿರುವ ಸಾಲಗಳು ... | 4,000 | ಸರಕಾರಿ ಭದ್ರತಾ ಪತ್ರಗಳ | |
| ಬೆಂಕಿ ವಿಮೆ ... | 4,000 | ಮೇಲಿನ ಬಡ್ಡಿ ... | 15,000 |
| ಜಾಹಿರಾತುಗಳು ... | 9,000 | ಇತರೆ ಆದಾಯಗಳು ... | 8,000 |
| ಸವಕಳಿ ... | 8,000 | | |
| ಬಾರದಿರುವ ಸಾಲದ ನಿಧಿ ... | 16,000 | | |
| ಕಸ್ಟಮ್ಸ್ ತೆರಿಗೆ ... | 4,000 | | |
| ಮುಂಗಡ ಆದಾಯ ತೆರಿಗೆ ... | 12,000 | | |
| ಕಾನೂನು ವೆಚ್ಚಗಳು ... | 3,000 | | |
| ಮೋಟಾರ ಕಾರು ವೆಚ್ಚಗಳು ... | 2,000 | | |
| ನಿವ್ವಳ ಲಾಭ ... | 2,78,000 | | |
| | 3,84,000 | | 3,84,000 |

ಸಾಮಾನ್ಯ ಖರ್ಚುಗಳಲ್ಲಿ ರೂ. 4,000, ವ್ಯಾಪಾರದ ಹಿತದೃಷ್ಟಿಯಿಂದ ನೌಕರನನ್ನು ಕೆಲಸದಿಂದ ವಜಾಗೊಳಿಸಲಾಗಿದ್ದಕ್ಕೆ ಪರಿಹಾರ ಧನವಾಗಿ ಪಾವತಿಸಿದ್ದು, ಕೂಡಿಕೊಂಡಿರುತ್ತದೆ.

ರೂ. 3,600 ಅನುಮತಿಸಿದ ಸವಕಳಿಗಿಂತ ಹೆಚ್ಚಾಗಿರುತ್ತದೆ. ಜಾಹಿರಾತುಗಳ ವೆಚ್ಚದಲ್ಲಿ ರೂ. 1,000 ಕಟ್ಟಿಗೆಯ ಶೋಕೇಸ್ ಹಾಗೂ ರೂ. 3,000 ಕ್ಯಾಲೆಂಡರ್‌ಗಳ ವೆಚ್ಚವು ಸೇರಿರುತ್ತದೆ.

13. **ಪ್ರಕರಣ ಅಧ್ಯಯನ :**

ಶ್ರೀ ಶಿವಪ್ಪ ಇವರು ಎರಡು ಮನೆಗಳ ಮಾಲಿಕರಾಗಿದ್ದು, ಹಣಕಾಸು ವರ್ಷ 2013–14ರಲ್ಲಿ ಈ ಎರಡು ಮನೆಗಳನ್ನು ಅವರು ಸ್ವಂತ ಉಪಯೋಗಕ್ಕೆ ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಆ ಎರಡು ಮನೆಗಳ ವಿವರ ಈ ಕೆಳಗಿನಂತೆ ಇರುತ್ತದೆ :

| ವಿವರಗಳು | | ಮನೆ *I* | ಮನೆ *II* |
|---|---|---|---|
| ನಗರ ಸಭೆ ಮೌಲ್ಯ | ... | 12,00,000 | 15,00,000 |
| ನೈಜ ಬಾಡಿಗೆ ಮೌಲ್ಯ | ... | 13,00,000 | 14,00,000 |
| ಪ್ರಮಾಣೀಕೃತ ಬಾಡಿಗೆ | ... | 11,00,000 | 12,00,000 |
| ಪಾವತಿಸಿದ ನಗರಸಭೆ ತೆರಿಗೆಗಳು | ... | 1,20,000 | 1,50,000 |
| ಮನೆ ಕಟ್ಟಲು ತೆಗೆದುಕೊಂಡ ಸಾಲದ ಮೇಲಿನ ಹಣಕಾಸು ವರ್ಷದ ಬಡ್ಡಿ | ... | 1,80,000 | 1,40,000 |

**ಪ್ರಶ್ನೆಗಳು :**

(a) ಶ್ರೀ ಶಿವಪ್ಪ ಇವರು ಯಾವ ಮನೆಯನ್ನು ತಮ್ಮ ಸ್ವಂತ ಉಪಯೋಗಕ್ಕಾಗಿ ಎಂದು ಪರಿಗಣಿಸಿಕೊಳ್ಳಬಹುದು.

(b) ಯಾಕೆ ಆ ಮನೆಯನ್ನೇ ಅವರ ಸ್ವಂತ ಉಪಯೋಗಕ್ಕೆ ಬಳಸಿಕೊಳ್ಳಬೇಕು ಎಂಬುದಕ್ಕೆ ಕಾರಣಗಳನ್ನು ನೀಡಿರಿ.

(3 × 15 = 45 marks)